■ ಹನಿ



## ಹ್ಯಾಪಿ ಬರ್ತ್‌ಡೇ!

95ರ ಅಜ್ಜ ನೆಲ್ಸನ್ ಮಂಡೇಲಾ ಪ್ರಿಟೋರಿಯಾದ ಆಸ್ಪತ್ರೆಯ ಮಂಚದ ಮೇಲೆ ಮಲಗಿಯೇ ಹುಟ್ಟುಹಬ್ಬ ಆಚರಿಸಿಕೊಂಡಿದ್ದಾರೆ. ಜೂನ್ 8ರಂದು ಆಸ್ಪತ್ರೆ ಸೇರಿದ ಬಳಿಕ ಹಲವು ಸಲ ಅವರ ಸ್ಥಿತಿ ಚಿಂತಾಜನಕ ಎಂದು ಸುದ್ದಿಯಾಗಿತ್ತು. ಹುಟ್ಟುಹಬ್ಬಕ್ಕೇ ಮುನ್ನವೇ ದುಃಖದ ಸುದ್ದಿ ಬರಬಹುದೆಂದು ಅಭಿಮಾನಿಗಳು ಆತಂಕಕ್ಕೆ ಒಳಗಾಗಿದ್ದರು. ಆದರೆ ಮಂಡೇಲಜ್ಜ ತಮ್ಮ ಹುಟ್ಟುಹಬ್ಬಕ್ಕೆ ಶುಭ ಹಾರೈಸಲು ಆಸ್ಪತ್ರೆಗೆ ಬಂದಿದ್ದ ದಕ್ಷಿಣ ಆಫ್ರಿಕಾದ ಅಧ್ಯಕ್ಷರನ್ನು ನೋಡಿ ಮುಗುಳ್ನಕ್ಕಿದ್ದಾರೆ. ಇಡೀ ದೇಶವೇ ನೆಮ್ಮದಿಯ ನಿಟ್ಟುಸಿರು ಬಿಟ್ಟು, 'ಹ್ಯಾಪಿ ಬರ್ತ್‌ಡೇ' ಎಂದು ಹಾಡಿದೆ.

ಈ ಶತಮಾನ ಕಂಡ ಬಹುದೊಡ್ಡ ಹೋರಾಟಗಾರ ನೆಲ್ಸನ್ ಮಂಡೇಲಾ. ವೃತ್ತಿಯಿಂದ ವಕೀಲರಾಗಿ, ಗಾಂಧೀಜಿಯ ಹೋರಾಟದ ಸ್ಫೂರ್ತಿಯೊಂದಿಗೆ ವರ್ಣಭೇದದ ವಿರುದ್ಧ ಗುಡುಗಿದಾತ. 1962ರಲ್ಲಿ ಅಲ್ಲಿನ ಬಿಳಿಯರ ಸರಕಾರ ಮಂಡೇಲಾರನ್ನು ಐದು ವರ್ಷಗಳ ಅವಧಿಗೆ ಜೈಲಿಗೆ ತಳ್ಳಿತ್ತು. 64ರಲ್ಲಿ ಮತ್ತೊಂದು ಆರೋಪ ಹೊರಿಸಿ ಜೀವಾವಧಿ ಜೈಲು ಶಿಕ್ಷೆ ವಿಧಿಸಿತು. ಒಟ್ಟು 28 ವರ್ಷಗಳ ಕಾಲ ಜೈಲಿನಲ್ಲಿದ್ದ ಮಂಡೇಲಾ, ತಮ್ಮ ದೇಶಕ್ಕೆ ಮಾತ್ರವಲ್ಲ, ಜಗತ್ತಿನ ಎಲ್ಲ ದೇಶಗಳ ಸ್ವಾತಂತ್ರ್ಯ ಹೋರಾಟಗಾರರಿಗೂ ಸ್ಫೂರ್ತಿಯಾದರು. 90ರಲ್ಲಿ ಅವರು ಜೈಲಿನಿಂದ ಹೊರಬಂದ ಬಳಿಕ, 94ರಲ್ಲಿ ಕರಿಯರು–ಬಿಳಿಯರೆಲ್ಲರೂ ಭಾಗವಹಿಸಿದ ದಕ್ಷಿಣ ಆಫ್ರಿಕಾದ ಮೊದಲ ಚುನಾವಣೆ ನಡೆಯಿತು. ಮಂಡೇಲಾ ರಾಷ್ಟ್ರಾಧ್ಯಕ್ಷರಾಗಿ ಆಯ್ಕೆಯಾಗಿ ದಾಖಲೆ ಬರೆದರು.

ಹೋರಾಟಗಾರನ ಬದುಕು ಎಂದೂ ಮುಳ್ಳಿನ ಹಾಸಿಗೆಯಲ್ಲ. ಮಂಡೇಲಾಗೆ ಅದು ಗೊತ್ತಿತ್ತು. ದೇಶವಾಸಿಗಳ ಸ್ವಾತಂತ್ರ್ಯ–ಸಮಾನತೆಗಾಗಿ ನಡೆಸಿದ ಹೋರಾಟದಿಂದ ವ್ಯಕ್ತಿಗತ ಜೀವನದಲ್ಲಿ ಸಾಕಷ್ಟು ಏರಿಳಿತಗಳನ್ನೂ ಅವರು ಕಂಡರು. ಪ್ರಾಸ್ಟೇಟ್ ಕ್ಯಾನ್ಸರ್ ಬಂದದ್ದು, ಪತ್ನಿಯರ ಜತೆಗಿನ ವಿರಸ, ಮಗನೊಬ್ಬ ಎಚ್‌ಐವಿ ವೈರಸ್‌ಗೆ ಬಲಿಯಾದದ್ದು– ಎಲ್ಲವನ್ನೂ ಸ್ಥಿತಪ್ರಜ್ಞರಾಗಿ ಎದುರಿಸಿದ ಮಂಡೇಲಾ ಇವತ್ತು ಜಾಗತಿಕ ಕಣ್ಮಣಿಯಾಗಿರುವುದು ಸಹಜವಾಗಿಯೇ ಇದೆ. ಆಸ್ಪತ್ರೆಯಲ್ಲಿ ಮಲಗಿ ಇಯರ್‌ಫೋನ್ ಹಚ್ಚಿಕೊಂಡು ಟೀವಿ ನೋಡುತ್ತಿರುವ, ಮನೆಯ ಸದಸ್ಯರ ಭೇಟಿಯ ವೇಳೆ ಕೈ ಮತ್ತು ಕಣ್ಣಿನ ಮೂಲಕ ಮಾತ್ರ ಮಾತನಾಡುತ್ತಿರುವ ಮಂಡೇಲಾ ಬೇಗ ಗುಣವಾಗಲಿ. 15 ವರ್ಷಗಳಿಂದ ಅವರ ಜೀವನ ಸಂಗಾತಿಯಾಗಿರುವ ಮೂರನೇ ಪತ್ನಿ ಗ್ರೇಸ್ ಮ್ಯಾಕೆಲ್‌ರ ಮನೆಗೆ ಬರಮಾಡಿಕೊಳ್ಳುವ ಕನಸು ನನಸಾಗಲಿ.

## ರೂನಿ ವರ್ಗಾವಣೆ?




ವೇಯ್ನ್ ರೂನಿ ಎಂದಾಕ್ಷಣ ಇಂಗ್ಲೆಂಡಿನ ಫುಟ್‌ಬಾಲ್ ಪ್ರೇಕ್ಷಕರ ಹೃದಯ ಬಡಿತ ಹೆಚ್ಚುತ್ತದೆ. ಜಗತ್ತಿನಾದ್ಯಂತ ಫುಟ್‌ಬಾಲ್ ಆಡುವ ದೇಶಗಳಲ್ಲಿ ರೂನಿಯ ಆಟವನ್ನು ಮೆಚ್ಚುವ ಲಕ್ಷಾಂತರ ಪ್ರೇಕ್ಷಕರಿದ್ದಾರೆ. ರೂನಿ ಹೋಟೆಲ್ಲಿಗೆ ಊಟಕ್ಕೆ ಹೋದರೂ ಸುದ್ದಿ– ಹೋಗದಿದ್ದರೂ ಸುದ್ದಿ. ಸದ್ಯಕ್ಕೆ ಮ್ಯಾಂಚೆಸ್ಟರ್ ಯುನೈಟೆಡ್ ಕ್ಲಬ್ ಪರವಾಗಿ ಆಡುತ್ತಿರುವ ರೂನಿ, ಈ ಕ್ಲಬ್ ಅನ್ನು ಬಿಟ್ಟು ಬೇರೆ ಕ್ಲಬ್‌ಗೆ ಸೇರುತ್ತಾನೆ ಎನ್ನುವುದೀಗ ಬಿಸಿ ಸುದ್ದಿ. ಆದರೆ ಕಳೆದ ಮೂರು ತಿಂಗಳಿಂದ ಈ ಸುದ್ದಿ ನಿಜವಾಗುತ್ತಲೂ ಇಲ್ಲ– ತಣ್ಣಗಾಗುತ್ತಲೂ ಇಲ್ಲ! ರೂನಿ ಮ್ಯಾಂಚೆಸ್ಟರ್ ಕ್ಲಬ್ ಬಿಡಬೇಕೇ ಬೇಡವೇ ಎಂಬ ಬಗ್ಗೆಯೇ ಮಾಧ್ಯಮಗಳಲ್ಲಿ ತಜ್ಞರ ದೊಡ್ಡ ಮಟ್ಟದ ಚರ್ಚೆ ನಡೆಯುತ್ತಿದೆ!

ರೂನಿ ಖರೀದಿಗೆ ಚೆಲ್ಸಿಯಾ ತುದಿಗಾಲಲ್ಲಿ ನಿಂತಿದೆ. ಜತೆಗೆ ಆರ್ಸೆನಲ್ ಮತ್ತು ಸೇಂಟ್ ಜರ್ಮೇನ್ ಕ್ಲಬ್‌ಗಳೂ ಯತ್ನಿಸುತ್ತಿವೆ. 27ರ ಹರೆಯದ ರೂನಿಯನ್ನು ಖರೀದಿಸಲು ಚೆಲ್ಸಿಯಾ 20 ದಶಲಕ್ಷ ಪೌಂಡ್ (ಸುಮಾರು 1810 ಕೋಟಿ ರೂಪಾಯಿ) ನೀಡಲು ಸಿದ್ಧವಿದೆ ಎನ್ನುವುದು ಸುದ್ದಿ! ಫುಟ್‌ಬಾಲ್ ಜಗತ್ತಿನಲ್ಲಿ ಸದ್ಯಕ್ಕೆ ಮೆಸ್ಸೀ ಮತ್ತು ರೊನಾಲ್ಡೊ ಬಿಟ್ಟರೆ ಅತ್ಯಧಿಕ ಸಂಭಾವನೆ ಪಡೆಯುವ ಆಟಗಾರ ರೂನಿ. ವರ್ಷಕ್ಕೆ 18 ದಶಲಕ್ಷ ಪೌಂಡ್ ಆದಾಯ ಗಳಿಸುವ ರೂನಿ ಮಾತ್ರ ವರ್ಗಾವಣೆಯ ಬಗ್ಗೆ ತುಟಿ ಬಿಚ್ಚುತ್ತಿಲ್ಲ!

Printed and Published by S.V. Srinivasan on behalf of The Printers (Mysore) Private Ltd. Printed at Rajhans Enterprises, No.134, 4th Main Road, Industrial Town, Rajajinagar, Bangalore- 560044 and published from The Printers (Mysore) Private Ltd., Plot Nos. 7 to12, Kumbalgodu Industrial Area, II Phase, Bangalore - 560074. Editor: K.N. TILAK KUMAR.
Editorial Office: 75, M.G Road, Bangalore-560 001 E-mail:editorsu@sudha.co.in. Phone: 2588 0000, Fax: 25880618, Editorial:25880619, Circ:1800-425-8009, Advt: 1800-425-8008, ©All rights reserved. Reproduction in whole or in part without permission is prohibited.
RNI No 7891/65